## ಕರ್ನಾಟಕ ಸರ್ಕಾರ

ಸಂ:ಗ್ರಾಅಪ/03/ಗಣಕ ಕೋಶ-2013

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು;ದಿನಾಂಕ:22.07.2013

## ಸುತ್ತೋಲೆ

ವಿಷಯ: Work Soft ತಂತ್ರಾಂಶದ ಅಳವಡಿಕೆ ಹಾಗೂ ಉಪಯೋಗದ ಕುರಿತು.

ಉಲ್ಲೇಖ: 1) ಗ್ರಾಅಪ/03/ಗಣಕ ಕೋಶ-2013, ದಿನಾಂಕ:24.06.2013.
2) ಗ್ರಾಅಪ/03/ಗಣಕ ಕೋಶ-2013, ದಿನಾಂಕ:03.07.2013.

******

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಕೈಗೊಳ್ಳುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ಅಗತ್ಯ ಮಾಹಿತಿ, ಸದರಿ ಕಾಮಗಾರಿಗಳ ಅನುಷ್ಠಾನದ ವಿವಿಧ ಹಂತಗಳ ಆರ್ಥಿಕ ಹಾಗೂ ಭೌತಿಕ ಪ್ರಗತಿ ವಿವರ ಇತ್ಯಾದಿಗಳೆಲ್ಲವು ಲಭ್ಯವಾಗಲು ಅನುವಾಗುವ Work Soft ತ್ಂತ್ರಾಂಶವನ್ನು NIC ಸಂಸ್ಥೆಯಿಂದ ಅಭಿವೃದ್ಧಿಪಡಿಸಲಾಗಿದೆ. ಉಲ್ಲೇಖ ಪತ್ರ ಸಂಖ್ಯೆ (1) ಮತ್ತು (2) ರಲ್ಲಿ ಇಲಾಖೆಯ ವಿವಿಧ ಆಯ್ದ ಅಧಿಕಾರಿ/ನೌಕರರಿಗೆ ತಂತ್ರಾಂಶದ ಉಪಯೋಗದ ಬಗ್ಗೆ ಒಂದು ದಿನದ ತರಬೇತಿಯನ್ನು ಆಯೋಜಿಸಲು ಸೂಚಿಸಲಾಗಿರುತ್ತದೆ.

ಅಗತ್ಯ ಮಾರ್ಪಾಡುಗಳನ್ನೊಳಗೊಂಡ ಸುಧಾರಿತ Work Soft ತಂತ್ರಾಂಶವು ಇಲಾಖೆಯ ಉಪಯೋಗಕ್ಕಾಗಿ ಸಿದ್ಧವಾಗಿದ್ದು, ಅದನ್ನು http://worksoft.kar.nic.in link ನಡಿ ತಲುಪಬಹುದಾಗಿದೆ.

- Work Soft ತಂತ್ರಾಂಶದಡಿ ಕಾಮಗಾರಿಯ ವಿವಿಧ ಮಜಲುಗಳಾದ ಕ್ರಿಯಾ ಯೋಜನೆ, ಆಡಳಿತಾತ್ಮಕ ಅನುಮೋದನೆ, ಕಾಮಗಾರಿ ವಿವರ, ತಾಂತ್ರಿಕ ಮಂಜೂರಾತಿ, ಪ್ಯಾಕೇಜ್, ಟೆಂಡರ್ ವಿವರ, ಕಾಮಗಾರಿ ಆದೇಶ, ಮಾಪನ ವರದಿ, ಪರೀಕ್ಷಣಾ ವರದಿ ಹಾಗೂ ಕಾಮಗಾರಿಯ ಮುಕ್ತಾಯ, ಅನುದಾನ ಬಿಡುಗಡೆ ಲಭ್ಯತೆ, ವೆಚ್ಚ, ಬಿಲ್ ಪಾವತಿ ಇತ್ಯಾದಿಗಳ ವಿವರಗಳ ದಾಖಲಾತಿ ಸೌಲಭ್ಯವಿರುತ್ತದೆ.
- ಪ್ರಾಥಮಿಕ ಹಂತವಾಗಿ ತಂತ್ರಾಂಶದಡಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ(PRED), ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ(KRRDA) ಹಾಗೂ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ(KRIDL), ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳಿಗೆ ಸಂಬಂಧಿಸಿದ ಕಾಮಗಾರಿಗಳ ವಿವರ ದಾಖಲಿಸಲು ಅವಕಾಶ ಮಾಡಲಾಗಿರುತ್ತದೆ.

| ಕ್ರಸ ಂ. | ಇಲಾಖೆ/ಕಛೇರಿ | ತಂತ್ರಾಂಶದಲ್ಲಿ ಸಂಪೂರ್ಣ ಮಾಹಿತಿ ದಾಖಲಾತಿ ಜವಾಬ್ದಾರಿ | ಷರಾ |
|---|---|---|---|
| 1 | ಗ್ರಾಮ ಪಂಚಾಯಿತಿ | ಪಂಚಾಯಿತಿ ಅಭಿವೃದ್ಧಿ ಅಧಿಕಾರಿ(PDO's) | ಪಂಚತಂತ್ರ ತಂತ್ರಾಂಶಕ್ಕೆ ನೀಡಿರುವ User Id & Password ಉಪಯೋಗದೊಂದಿಗೆ Work Soft ತಂತ್ರಾಂಶದ link ನ್ನು ತೆರೆಯಬದಾಗಿದೆ. |
| 2 | ತಾಲ್ಲೂಕು ಪಂಚಾಯಿತಿ | ಕಾರ್ಯನಿರ್ವಾಹಕ ಅಧಿಕಾರಿಗಳು(EO's) | ಪಂಚತಂತ್ರ ತಂತ್ರಾಂಶಕ್ಕೆ ನೀಡಿರುವ User Id & Password ಉಪಯೋಗದೊಂದಿಗೆ Work Soft ತಂತ್ರಾಂಶದ link ನ್ನು ತೆರೆಯಹುದಾಗಿದೆ. |
| 4 | ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ(PRED) | ಕಾರ್ಯನಿರ್ವಾಹಕ ಅಭಿಯಂತರರು | Work Soft ತಂತ್ರಾಂಶದ ಉಪಯೋಗಕ್ಕಾಗಿ ನೀಡಲಾದ ಪ್ರತ್ಯೇಕ User Id & Password ಉಪಯೋಗಿಸತಕ್ಕದ್ದು. |

| | | | |
|---|---|---|---|
| 5 | ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ (KRIDL), | ಉಪ ನಿರ್ದೇಶಕರು | Work Soft ತಂತ್ರಾಂಶದ ಉಪಯೋಗಕ್ಕಾಗಿ ನೀಡಲಾದ ಪ್ರತ್ಯೇಕ User Id & Password ಉಪಯೋಗಿಸತಕ್ಕದ್ದು. |
| 6 | ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ(KRRDA) | ಕಾರ್ಯನಿರ್ವಾಹಕ ಅಭಿಯಂತರರು | Work Soft ತಂತ್ರಾಂಶದ ಉಪಯೋಗಕ್ಕಾಗಿ ನೀಡಲಾದ ಪ್ರತ್ಯೇಕ User Id & Password ಉಪಯೋಗಿಸತಕ್ಕದ್ದು. |

- ಅನುದಾನ ಸ್ವೀಕೃತಿ ಬಿಡುಗಡೆ ವಿವರಗಳನ್ನೊಳಗೊಂಡಂತೆ ತಂತ್ರಾಂಶದ ನಿರ್ವಹಣೆಯನ್ನು ಪಂ.ರಾ.ಇಂ.ಇಲಾಖೆ, ಕ.ಗ್ರಾ.ಮೂ.ಅ.ನಿ., ಹಾಗೂ ಕ.ಗ್ರಾ.ರ.ಅ.ಸಂಸ್ಥೆಯ ನೋಡಲ್ ಅಧಿಕಾರಿಗಳು ಇಲಾಖೆಯ ಎಲ್ಲಾ ನಿರ್ದೇಶಕರ ಸಮನ್ವಯದೊಂದಿಗೆ ಮಾಡಬೇಕಾಗಿರುತ್ತದೆ.

ಮೇಲೆ ವಿವರಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಂಗಸಂಸ್ಥೆಗಳು ಪ್ರಸಕ್ತ ಸಾಲಿನಿಂದಲೇ ಅಂದರೆ 2013–14ನೇ ಸಾಲಿನಿಂದ ಎಲ್ಲಾ ಕೇಂದ್ರ ಸರ್ಕಾರದ ಯೋಜನೆಗಳು, ಎಲ್ಲಾ ರಾಜ್ಯ ಸರ್ಕಾರದ ಯೋಜನೆಗಳು, ಎಲ್ಲಾ ಜಿಲ್ಲಾ ವಲಯ ಯೋಜನೆಗಳು, ಎಲ್ಲಾ ಬಾಹ್ಯ ಅನುದಾನಿತ ಯೋಜನೆಗಳು, ಸ್ವಂತ ಸಂಪನ್ಮೂಲ ಮತ್ತು 13ನೇ ಹಣಕಾಸು ಯೋಜನೆಗಳು ಕೈಗೊಳ್ಳುವ ಎಲ್ಲಾ ಕ್ರಿಯಾ ಯೋಜನೆಗಳ ವಿವರಗಳನ್ನು Work Soft ತಂತ್ರಾಂಶದಲ್ಲಿ ದಾಖಲಿಸಲು ಕಾರ್ಯೋನ್ಮುಖರಾಗತಕ್ಕದ್ದು.

ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮೇಲೆ ಸೂಚಿಸಿದ ಎಲ್ಲಾ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತ್ ಮತ್ತು ವಿಭಾಗಗಳು ಈ ಸಂಬಂಧ ಕೈಗೊಂಡ ಕ್ರಮಗಳ ಬಗೆಗೆ ಮೇಲುಸ್ತುವಾರಿ ವಹಿಸುವರು ಮತ್ತು ದಿನಾಂಕ:**15.08.2013** ರೊಳಗೆ ಅನುಪಾಲನಾ ವರದಿಯನ್ನು ಸಲ್ಲಿಸತಕ್ಕದ್ದು.

ಲಗತ್ತು: **Work Soft ತಂತ್ರಾಂಶದ User Manual.**

Rashmi V.
(ವಿ.ರಶ್ಮಿ)
ಸರ್ಕಾರದ ಕಾರ್ಯದರ್ಶಿಗಳು(ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ ಜಿಲ್ಲಾ ಪಂಚಾಯತ್.
2. ಎಲ್ಲಾ ತಾಲ್ಲೂಕು ಪಂಚಾಯತ್‌ನ ಕಾರ್ಯ ನಿರ್ವಾಹಕ ಅಧಿಕಾರಿಗಳು ಮತ್ತು ಎಲ್ಲಾ ಗ್ರಾಮ ಪಂಚಾಯತ್‌ನ ಅಭಿವೃದ್ಧಿ ಅಧಿಕಾರಿಗಳಿಗೆ.
3. ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ(PRED), ಬೆಂಗಳೂರು.
4. ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ (KRIDL), ಬೆಂಗಳೂರು.
5. ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ(KRRDA), ಬೆಂಗಳೂರು.
6. ಎಲ್ಲಾ 38 ಕಾರ್ಯಪಾಲಕ ಇಂಜಿನಿಯರರ್(ಪಂ.ರಾಜ್ ಇಲಾಖೆ).